## ಪಿ. ಯು. ಸಿ. ದ್ವಿತೀಯ ವರ್ಷದ ಪೂರ್ವಸಿದ್ಧತಾ ಪರೀಕ್ಷೆ 2023 ಗುಣಗಳು : 100

ದಿನಾಂಕ : 21 - 01 - 2023 ವಿಷಯ : ಕನ್ನಡ (01) ವೇಳೆ : ಮುಂ.10-15 ರಿಂದ ಮ. 1-30

ಸೂಚನೆ 1) ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ 2) ಪ್ರಶ್ನೆಗಳನ್ನು ಕಡ್ಡಾಯವಾಗಿ ಕ್ರಮಾನುಗತಗೊಳಿಸಿ.

### ಅ - ಬಹು ಆಯ್ಕೆ ಪ್ರಶ್ನೆ ವಿಭಾಗ

I ಅ) ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. 10X1=10

1) ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು ?
ಅ) ದ್ರೌಪದಿ ಆ) ಅನಸೂಯಾ ಇ) ಸೀತೆ ಈ) ಮಂಡೋದರಿ

2) ಬಸವಣ್ಣನವರ ವಚನಗಳ ಅಂಕಿತ ಯಾವುದು ?
ಅ) ಗುಹೇಶ್ವರ ಆ) ಕೂಡಲ ಸಂಗಮದೇವ ಇ) ರಾಮನಾಥ ಈ) ಚೆನ್ನಮಲ್ಲಿಕಾರ್ಜುನ

3) ಮನದೊಳಗೆ ಹಗೆಗಳನು ಹಿಂಡಿದವರಾರು ?
ಅ) ಅರ್ಜುನ ಆ) ಲಕ್ಷ್ಮಣ ಇ) ದುಶ್ಯಾಸನ ಈ) ಭೀಮ

4) ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ ?
ಅ) ಹತ್ತಿ ಬೀಜ ಆ) ಕಡಲೆ ಬೀಜ ಇ) ಬೇವಿನ ಬೀಜ ಈ) ಶೇಂಗಾ ಬೀಜ

5) ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು ?
ಅ) ಕರಡಿ ಬಾಲದ ಕೋತಿಗಳು ಆ) ಸಿಂಹ ಬಾಲದ ಕೋತಿಗಳು
ಇ) ಕುದುರೆ ಬಾಲದ ಕೋತಿಗಳು ಈ) ನರಿ ಬಾಲದ ಕೋತಿಗಳು

6) ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು ?
ಅ) ಡಾ. ಪಿ. ಆರ್. ರಾವ್ ಆ) ಡಾ. ಎನ್. ಆರ್. ರಾವ್
ಇ) ಡಾ. ಸಿ. ಎನ್. ಆರ್. ರಾವ್ ಈ) ಡಾ. ಎಂ. ಆರ್. ರಾವ್

7) ವಿಜ್ಞಾನದ ಅಡಿಪಾಯ ಯಾವುದು ?
ಅ) ವಿಮರ್ಶಿಸುವುದು ಆ) ಚರ್ಚಿಸುವುದು ಇ) ಪ್ರಶ್ನೆ ಕೇಳುವುದು ಈ) ತರ್ಕಿಸುವುದು

8) ನಿರೂಪಕರ ಇಕಾಲಜಿಸ್ಟ ಗೆಳೆಯ ಯಾರು ?
ಅ) ಆಕಾಶ ಆ) ರಮೇಶ ಇ) ಸಂತೋಷ ಈ) ಪ್ರಕಾಶ

9) ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು ?
ಅ) ದುರ್ಗಪ್ಪ ಆ) ರಾಮಪ್ಪ ಇ) ತಿಪ್ಪಣ್ಣ ಈ) ಸುಬ್ಬಣ್ಣ

10) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?
ಅ) ಕೆಮ್ಮಣ್ಣು ಗುಂಡಿಯಲ್ಲಿ ಆ) ಶಿಕಾರಿ ಗಂಡಿಯಲ್ಲಿ ಇ) ತೆಗ್ಗಿನಲ್ಲಿ ಈ) ಮರದ ಪೊಟರೆಯಲ್ಲಿ

ಆ) 11) ಹೊಂದಿಸಿ ಬರೆಯಿರಿ. 5X1=5

| | |
|---|---|
| ಅ. ವಚನಗಳು | ಪುರಂದರದಾಸರು |
| ಆ. ಸೋಮೇಶ್ವರ ಶತಕ | ದ. ರಾ. ಬೇಂದ್ರೆ |
| ಇ. ಜನಪದ | ಉರಿಲಿಂಗ ಪೆದ್ದಿ |
| ಈ. ನಾಕು ತಂತಿ | ಪುಲಿಗೇರಿ ಸೋಮನಾಥ |
| ಉ. ಒಮ್ಮೆನಗುತ್ತೇವೆ | ಹಾಲುಂಡ ತವರಿಗಿ |
| | ಸುಕನ್ಯಾ ಮಾರುತಿ |

ಇ) 12) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5X1=5
(ಬೆಳ್ಳಿ ಲೋಟ, ರುದ್ರಪ್ಪ, ರಾಮಚಂದ್ರ, ಚಂದ್ರಭವನ, ಕಿಡ್ನಿ ಸ್ಟೋನ)

ಕ. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಿಣಿ ......................

ಚ. ಲೇಖಕಿಯ ಪತಿ .................... ತೊಂದರೆಯಿಂದ ಬಳಲಿದರು.

ಟ. ಧಣಿಗಳ ದಾಂಪತ್ಯಕ್ಕೆ ................ ಮೂಕಸಾಕ್ಷಿಯಾಗಿತ್ತು.

ಇ. ವಸುಧೆಗೆ ಒಡೆಯನೆನಿಸಿದವನು ....................

ಈ. ಲೇಖಕರು ಹೇಳುವ ಹಳ್ಳಿಯ ಹೋಟೇಲಿನ ಹೆಸರು ...............

### ಆ - ವಿಭಾಗ

II ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 4X2=8

13) ಯಾವಾಗ ನಿಲಬಹುದು ? ಯಾವಾಗ ನಿಲಬಾರದು ?
14) ಹೆಂಡತಿ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ ?
15) ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯಗಳೇನು ?
16) ಹಡೆದ ತಂದೆ - ತಾಯಿಯರ ಮಹತ್ವ ತಿಳಿಸಿ.
17) ಬೆಳಕು ಬೇಟೆಗಾರ ಹೇಗೆ ಬರುತ್ತಾನೆ ?

ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 3X2=6

18) ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು ?
19) ಸೀತಾಳ ಓದುವ ಆಸಕ್ತಿ ಹೇಗಿತ್ತು ?
20) ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?
21) ಯಾವ ಧಾಟಿಯಲ್ಲಿ ಕಥೆಯನ್ನು ಹೇಳೆಂದು ಮನೋರಮೆ ಕೇಳಿದಳು ?

ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 4X2=8

22) ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
23) ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು-ಯಾರು ?
24) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು ?
25) ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದ ?
26) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು ?

(ಪುಟ ತಿರುವಿರಿ)

ಇ - ವಿಭಾಗ

III ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2X3=6

27) "ಉದಾತ್ತನೊಳ್ ಪುಟ್ಟಿದಲ್ತೆ ನೀಲಿರಾಗಂ"

28) "ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ"

29) "ಬಂಗಾರ ನಿನಗ ಸ್ಥಿರವಲ್ಲ"

ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1X3=3

30) "ಬಸಲಿಂಗಪ್ಪ ನೀನು ತುಂಬಾ ಒಳ್ಳೆಯವನು"

31) "ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು"

ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1X3=3

32) "ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ"

33) "ಆನೆ ಬೇಲಿ ದಾಟಿ ಹೋಯ್ತು ಸಾರ್"

ಈ - ವಿಭಾಗ

IV ಅ) ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 2X4=8

34) ಬಸವಣ್ಣನವರ ಪ್ರಕಾರ ನೈಜ ಭಕ್ತಿಯ ಲಕ್ಷಣಗಳಾವುವು ?

35) ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

36) 'ಬೆಳಗು ಜಾವ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು ?

37) ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ ?

ಆ) ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 1X4=4

38) ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು ?

39) ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ನೇಮಿಚಂದ್ರ ಹೇಗೆ ನಿರೂಪಿಸಿದ್ದಾರೆ ?

40) ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

ಇ) ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 1X4=4

41) ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ ?

42) ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ ?

43) ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು ?

ಉ - ವಿಭಾಗ

V. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. 1X5=5

44) ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃಪ್ರಾಣಂ
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್ ॥

-- ಅಥವಾ --

ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲುವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ ॥

ಭಾಷಾಭ್ಯಾಸ

VI. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿರಿ. 6X2=12

| | | | | |
|---|---|---|---|---|
| 45) | ಈ ಪದಗಳಿಗೆ ಅರ್ಥ ಬರೆಯಿರಿ : | ಧುರ, | ಪಂಕ | ಲಘು |
| 46) | ಈ ಕ್ರಿಯಾಪದಗಳ ನಿಷೇಧ ರೂಪ ಬರೆಯಿರಿ : | ಬರೆಯುವನು, | ಕರೆಯಿತು | ನುಲ್ಲುವುದು |
| 47) | ಈ ಪದಗಳ ತತ್ಸಮ / ತದ್ಭವ ರೂಪ ಬರೆಯಿರಿ. | ವೇಳಾ, | ಘೂಕ | ಸಂಸ್ಥಾ |
| 48) | ಈ ಪದಗಳ ನಾನಾರ್ಥಗಳನ್ನು ಬರೆಯಿರಿ : | ನೆರೆ, | ಕೊನೆ | ಎಡೆ |
| 49) | ಈ ಪದಗಳಲ್ಲಿ ಗುಣವಾಚಕಗಳನ್ನು ಗುರುತಿಸಿ : | ಘೋರಪಾಪಿ, | ಹಸಿರು ಕಂಬಳಿ | ಹಾಡುಹಕ್ಕಿ |
| 50) | ಈ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ : | ಧರೆಯೊಳ್, | ಪಾಪಿಗೆ | ಕಣ್ಣಿನ ದೆಸೆಯಿಂದ |
| 51) | ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ : | ಕೈಯೊಡ್ಡು, | ತಲೆಬಾಗು | ಸಿಂಹ ಸ್ವಪ್ನ |

ಆ) ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ : 1X5=5

52) "ರಕ್ತದಾನ ಮತ್ತು ನೇತ್ರದಾನಗಳ ಮಹತ್ವ"

-- ಅಥವಾ --

"ಕ್ರೀಡೆ ಮತ್ತು ನಮ್ಮ ಆರೋಗ್ಯ"

ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 1X4=4

53) ಪರೀಕ್ಷಾ ಸಿದ್ಧತೆಯನ್ನು ಕುರಿತು ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

-- ಅಥವಾ --

ನಿಮ್ಮೂರಲ್ಲಿ ಗ್ರಂಥಾಲಯ ಆರಂಭಿಸುವಂತೆ ಕೇಳಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ 1X4=4

54) "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ"

-- ಅಥವಾ --

ಆಳಾಗಿ ದುಡಿ ಅರಸನಾಗಿ ಉಣ್ಣು"